ಸೃಜನಿ

**SRUJANI: Indian Journal of Innovative Research and Development (SIJIRD)**
Volume-5 Issue 1, March-April 2026, Pp. 39-47
Bi-Monthly, Peer-Reviewed, Open Access, Indexed Journal

**I S S N: 2583-3510**
SIRDF JOURNALS
editor@srujani.in
www.srujani.in

# ಹೊಸಕೋಟೆ ತಾಲೂಕಿನ ಮುಗಬಾಲ ಗ್ರಾಮದ ಸೋಮೇಶ್ವರ ದೇವಾಲಯ – ಒಂದು ನೆನಪು

**ಡಾ. ಸುಷ್ಮಾ ಹೆಚ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಮಹಿಳಾ ಕಾಲೇಜು, ದೊಡ್ಡಬಳ್ಳಾಪುರ

***Abstract:***
*ಈ ಸಂಶೋಧನಾ ಲೇಖನವು ಹೊಸಕೋಟೆ ತಾಲೂಕಿನ ಮುಗಬಾಲ ಗ್ರಾಮದ ಸೋಮೇಶ್ವರ ದೇವಾಲಯದ ಐತಿಹಾಸಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಅಧ್ಯಯನ ಮಾಡುತ್ತದೆ. ದೇವಾಲಯದ ಸ್ಥಾಪನೆ, ವಾಸ್ತುಶಿಲ್ಪ, ಶಿಲ್ಪಕಲೆ ಹಾಗೂ ಸ್ಥಳೀಯ ಜನರ ಧಾರ್ಮಿಕ ನಂಬಿಕೆಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ದೇವಾಲಯಕ್ಕೆ ಸಂಬಂಧಿಸಿದ ಪೌರಾಣಿಕ ಹಿನ್ನೆಲೆ, ಆಚರಣೆಗಳು, ಉತ್ಸವಗಳು ಮತ್ತು ಸ್ಥಳೀಯ ಸಂಪ್ರದಾಯಗಳನ್ನು ವಿಶ್ಲೇಷಿಸಲಾಗಿದೆ. ಈ ಅಧ್ಯಯನವು ಮುಗಬಾಲದ ಸೋಮೇಶ್ವರ ದೇವಾಲಯದ ಐತಿಹಾಸಿಕ ಪರಂಪರೆ ಹಾಗೂ ಸಂರಕ್ಷಣೆಯ ಅಗತ್ಯವನ್ನು ಸ್ಪಷ್ಟಪಡಿಸುತ್ತದೆ.*

***Keywords:*** *ಮುಗಬಾಲ, ಸೋಮೇಶ್ವರ ದೇವಾಲಯ, ಹೊಸಕೋಟೆ ತಾಲೂಕು, ದೇವಾಲಯ ವಾಸ್ತುಶಿಲ್ಪ, ಸಾಂಸ್ಕೃತಿಕ ಪರಂಪರೆ.*

## ಪೀಠಿಕೆ

ಹೊಸಕೋಟೆ ತಾಲೂಕು ಗಂಗರಿಂದ ಮೈಸೂರು ಒಡೆಯರ ಆಳ್ವಿಕೆಯವರೆಗೂ ಪ್ರಮುಖ ಆಡಳಿತ ಕೇಂದ್ರವಾಗಿ ಗುರುತಿಸಿಕೊಂಡಿದೆ. ತಾಲೂಕಿನ ದೇವಾಲಯಗಳಲ್ಲಿ ಗಂಗಶೈಲಿ, ನೊಳಂಬ ಶೈಲಿ ಮತ್ತು ವಿಜಯನಗರ ಶೈಲಿಯ ವಾಸ್ತು ಲಕ್ಷಣಗಳನ್ನು ಗುರುತಿಸಬಹುದು. ತಾಲೂಕಿನ ದೇವಾಲಯಗಳನ್ನು ಶಾಸನೋಕ್ತ ದೇವಾಲಯಗಳು ಮತ್ತು ಶಾಸನೋಕ್ತವಲ್ಲದ ದೇವಾಲಯಗಳು ಎಂದು ವಿಂಗಡಿಸಿ ನೋಡುವುದಾದರೆ ಬಹಳಷ್ಟು ದೇವಾಲಯಗಳು ಶಾಸನೋಕ್ತ ದೇವಾಲಯಗಳಾಗಿವೆ. ಹೊಸಕೋಟೆ ಪಟ್ಟಣದ ಅವಿಮುಕ್ತೇಶ್ವರ ದೇವಾಲಯ, ಮುಗಬಾಲದ ಸೋಮೇಶ್ವರ ದೇವಾಲಯ, ವೀರಭದ್ರಸ್ವಾಮಿ ದೇವಾಲಯ, ಕೊಂಡ್ರಹಳ್ಳಿಯ ಧರ್ಮೇಶ್ವರ ದೇವಾಲಯ, ಹೊಸಕೋಟೆಯ ಕಾಳಿಕಾ ಕಮಟೇಶ್ವರ ದೇವಾಲಯ, ವಾಗಟದ ನೀಲಕಂಠೇಶ್ವರ ದೇವಾಲಯ, ಮಾರೇನಹಳ್ಳಿಯ ಭೀಮೇಶ್ವರ ದೇವಾಲಯ, ನಂದಗುಡಿಯ ಕಾಡುಮಲ್ಲೇಶ್ವರ ದೇವಾಲಯ, ಕಾಡುಗೋಡಿಯ ಕಾಶಿವಿಶ್ವೇಶ್ವರ ದೇವಾಲಯ, ದೊಡ್ಡಗುಬ್ಬಿಯ ಸೋಮೇಶ್ವರ ದೇವಾಲಯ, ಜ್ಯೋತಿಪುರದ ಜ್ಯೋತಿಶ್ವರ ದೇವಾಲಯಗಳು ಶಾಸನೋಕ್ತ ದೇವಾಲಯಗಳು.

ಹೊಸಕೋಟೆ ತಾಲೂಕು ಕೇಂದ್ರದಿಂದ ಹನ್ನೆರಡು ಕಿ.ಮೀ ಹೊಸಕೋಟೆ–ಮಾಲೂರು ರಸ್ತೆಯಲ್ಲಿ ಈ ಗ್ರಾಮವಿದೆ. ಹೊಸಕೋಟೆ ಮತ್ತು ಮಾಲೂರು ತಾಲೂಕುಗಳ ಗಡಿ ಗ್ರಾಮ ಇದಾಗಿದೆ. ಗಂಗರ ಆಳ್ವಿಕೆಯ ಕಾಲದಿಂದಲೂ ಪ್ರಮುಖ ಆಡಳಿತ ಕೇಂದ್ರವಾಗಿರುವ ಮುಗಬಾಲ ಸಗಟೂರು

***Please cite this article as:*** ಸುಷ್ಮಾ, ಹೆಚ್. (2026). ಹೊಸಕೋಟೆ ತಾಲೂಕಿನ ಮುಗಬಾಲ ಗ್ರಾಮದ ಸೋಮೇಶ್ವರ ದೇವಾಲಯ – ಒಂದು ನೆನಪು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(1), 39–47

ನಾಡಪ್ರಭುಗಳ ಕಾಲಕ್ಕೂ ತನ್ನ ಪ್ರಾಮುಖ್ಯತೆ ಉಳಿಸಿಕೊಂಡಿದೆ.

ಕ್ರಿ.ಶ.1334ರ ವೀರಬಲ್ಲಾಳನ ಶಾಸನ ಈ ಸೋಮೇಶ್ವರ ದೇವಾಲಯವನ್ನು ತಿರುವೆಗಂಬಂ–ಉದ್ಯೆಯರ್ ಎಂದು ಉಲ್ಲೇಖಿಸಿದೆ.[1] ಸಿಂಗದಂಡನಾಯಕನ ಹಿರಿಯ ಸೋದರ, ತಿರುಮ್ಯೆಯಿಲಪ್ಪರ ಉದ್ಯೆಯನ್ ತುರುವನ್, ಗಂಗಪುರ ಮಾಂಡಲೀಕ ಬಲಿದೇವನ ಮಗ ವಲ್ಲಾಪ್ಪ–ದಂಡನಾಯಕ–ನದಂಡ್ಯೆನು ತಿರುವೆಗಂಬಂ–ಉದ್ಯೆಯರ್ ದೇವಾಲಯದಲ್ಲಿ ಬೆಳೆದಿದ್ದ ಗಿಡ–ಗಂಟೆಗಳನ್ನು ತೆಗೆಸಿ, ಶುಚಿಗೊಳಿಸಿ ಇಟ್ಟಿಗೆಯ ಅಧಿಷ್ಠಾನಕ್ಕೆ ಬದಲಾಗಿ ಕಲ್ಲಿನ ಅಧಿಷ್ಠಾನವನ್ನು ಮಾಡಿಸಿ, ದೇವರ ಪೂಜೆಯನ್ನು ಪುನಃ ಸ್ಥಾಪಿಸಿದನು.[2] ಈ ಶಾಸನವನ್ನು ವಲ್ಲಾಪ್ಪ ದಂಡನಾಯಕ ನದಂಡ್ಯೆಯನನ ಮಗ ಅಮ್ಯೆನಯನ್‌ನು ಶಿವೈಕ್ಯನಾದ ನಂತರ ಹಾಕಿಸಿದ್ದು ಕ್ರಿ.ಶ.1334ಕ್ಕಿಂತ ಮೊದಲು ಅಂದರೆ ಸರಿಸುಮಾರು ನೂರು ವರ್ಷಗಳ ಹಿಂದೆಯಾದರು ಈ ದೇವಾಲಯ ಇಟ್ಟಿಗೆ ಅಧಿಷ್ಠಾನದಿಂದ ಕಲ್ಲಿನ ಅಧಿಷ್ಠಾನಕ್ಕೆ ಬದಲಾಗಿರಬಹುದು. ಈ ದೇವಾಲಯದ ಲಕ್ಷಣಗಳು ಸಹ 12ನೇ ಶತಮಾನದ ಕೊನೆಯ ಘಟ್ಟಕ್ಕೆ ಹೋಲುತ್ತಿರುವುದರಿಂದ ಈ ದೇವಾಲಯ 12ನೇ ಶತಮಾನದ ಅಂತಿಮ ಘಟ್ಟದ ನಿರ್ಮಿತಿ ಎಂದು ಕಾಲ ನಿರ್ಣಯಿಸಬಹುದು.

ಇಟ್ಟಿಗೆಯ ಅಧಿಷ್ಠಾನವು ಗಂಗರ ಆಳ್ವಿಕೆಯ ಕ್ರಿ.ಶ.650–853ರ ಅವಧಿಗೆ ಸೇರಿದವು.[3] ಮಣ್ಣೆಯ ಕಪಿಲೇಶ್ವರ ದೇವಾಲಯವು ಶ್ರೀಪುರುಷನಿಗಿಂತ ಮೊದಲೇ ಅಸ್ಥಿತ್ವದಲ್ಲಿತ್ತೆಂದು ಐ.ಕೆ.ಶರ್ಮರವರು ಅಭಿಪ್ರಾಯಪಡುತ್ತಾರೆ. ಹೀಗಾಗಿ ಮುಗಬಾಲದ ಈ ದೇವಾಲಯವು ಶ್ರೀಪುರುಷ ಅಧಿಕಾರಕ್ಕೆ ಬರುವ ಮೊದಲು ಕೆರೆಕುಂಡ–300ರನ್ನು ಅಧಿಕಾರಿಯಾಗಿ ಆಳ್ವಿಕೆ ನಡೆಸುತ್ತಿದ್ದಾಗ[4] ಅಥವಾ ಅದಕ್ಕೂ ಮೊದಲೇ ನಿರ್ಮಾಣವಾಗಿರಬೇಕು. ಶ್ರೀಪುರುಷನ ಕ್ರಿ.ಶ.720ರ ಮಾರೇನಹಳ್ಳಿ ಶಾಸನ[5] ಮತ್ತು ಮುಗಬಾಲದ ಬಾಸ್ಕರಪ್ಪನ ಹೊಲದಲ್ಲಿನ ಶಾಸನಗಳು ಈ ಮುಗಬಾಲ ಕೆರೆಕುಂಡ–300ರನ್ನು ಭಾಗವಾಗಿತ್ತೆಂಬುದನ್ನು ತಿಳಿಸುತ್ತವೆ. ಹೀಗಾಗಿ ಈ ದೇವಾಲಯವು ಮಣ್ಣೆಯ ಕಪಿಲೇಶ್ವರ ದೇವಾಲಯದ ಸಮಕಾಲೀನವೆಂದು ಹೇಳಬಹುದು. ದೇವಾಲಯದಲ್ಲಿನ ಬಾಣಲಿಂಗವು ಗಂಗ ಕಾಲದ ಪ್ರತಿಷ್ಠಾಪನೆಯಾಗಿದೆ. ಕ್ರಿ.ಶ.7–8ನೇ ಶತಮಾನದಲ್ಲಿ ಸೋಮೇಶ್ವರ ದೇವಾಲಯ ಅಸ್ಥಿತ್ವದಲ್ಲಿದ್ದು 12ನೇ ಶತಮಾನದ ಕೊನೆಯ ಘಟ್ಟದಲ್ಲಿ ವಲ್ಲಾಪ್ಪ–ದಂಡನಾಯಕ ನದಂಡ್ಯೆನು ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದಾನೆ.

ವಲ್ಲಾಪ್ಪ ದಂಡನಾಯಕನ ಮಗ ಅಮ್ಯೆನಯನ್‌ಗೆ ಕೆಲವು ಕೆರೆ ಮತ್ತು ತೂಬುಗಳನ್ನು ಕಟ್ಟಿಸಿದ್ದಕ್ಕಾಗಿ ತಿರುಕ್ಕುಂಜಿನಾಡಿನ ನಿವಾಸಿಗಳು ಮತ್ತು ರಾಜನು ಕೊಟ್ಟುಕೊಡುಗ್ಯೆಯಾಗಿ ಭೂಮಿಯನ್ನು ನೀಡಿದ್ದು, ಎಲ್ಲಾ ತೆರಿಗೆಗಳಿಂದ ಮುಕ್ತವಾದ ಈ ಭೂಮಿಯ ಆದಾಯವನ್ನು ತಿರುವೆಗಂಬಂ ಉದ್ಯೆಯರ್ ದೇವನ ಪೂಜೆ ಮತ್ತು ನೈವೇದ್ಯಕ್ಕಾಗಿ ಬಳಸಿಕೊಳ್ಳುವುದು[6] ಎಂದು ಶಾಸನ ತಿಳಿಸುತ್ತದೆ. ಶಾಸನವು ಮುಂದುವರೆದು ತಿಳಿಸುವಂತೆ ನಿರ್ದಿಷ್ಟವಾಗಿ ಗುರುತಿಸಲಾದ ನಾಲ್ಕು ಹಳ್ಳಿಗಳಲ್ಲಿ ಯಾರಾದರೂ ಕುದುರೆಯನ್ನು ಕೊಂಡುಕೊಂಡರೆ ಮತ್ತು ಮಾರಿದರೆ ಪ್ರತಿ ಕುದುರೆಗೆ ಒಂದು ಪಣಂ ತೆರಿಗೆಯನ್ನು

---

[1] ಬಿ.ಎಲ್.ರೈಸ್, (1905), ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–9, ಮೈಸೂರು ಸರ್ಕಾರ ಕೇಂದ್ರೀಯ ಮುದ್ರಣಾಲಯ, ಬೆಂಗಳೂರು, Ht-96, AD-1334

[2] ಮೇಲಿನದೇ, Ht-96, AD-1334

[3] Sharma.I.K (1992), Temples of Gangas of Karnataka, ASI, Delhi, P.45

[4] ಬಿ.ಎಲ್.ರೈಸ್, (1905), ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–9, ಮೈಸೂರು ಸರ್ಕಾರ ಕೇಂದ್ರೀಯ ಮುದ್ರಣಾಲಯ, ಬೆಂಗಳೂರು, Ht-86, AD-720

[5] ಮೇಲಿನದೇ, Ht-86, AD-720

[6] ಮೇಲಿನದೇ, Ht-96, AD-1334

ಕಟ್ಟುವುದು. ಈ ಹಣವು ದೇವಾಲಯದ ನಿರ್ವಹಣೆಗೆ ಸೇರಿದ್ದಾಗಿರುತ್ತದೆ. ಸೆಟ್ಟಂಭಟ್ಟನ ಮಗ ಸೂಲದೈಯಪ್ಪನ್‌ನ ಮಕ್ಕಳಾದ ಕಶ್ಯಪಗೋತ್ರ ಬೊರ್‍ಯನ–ಸೂತ್ರದ–ಮಾರಪ್ಪ ಮತ್ತು ಸುವುರೈಯಪ್ಪನವರು ದೇವಾಲಯ ಮತ್ತು ದೇವಾಲಯ ಭೂಮಿಯ ಉಸ್ತುವಾರಿ ನೋಡಿಕೊಳ್ಳುತ್ತಾರೆ. ದೇವಾಲಯವನ್ನು ಕಟ್ಟಿದ ತಿರುವಸಿರಿ–ಕಲಿಯುಗ ಮಯ್ಯನನಿಗೂ ಕೆಲ ಭೂಮಿಯನ್ನು ದಾನ ನೀಡಲಾಗಿದೆ[7] ಎಂದು ಶಾಸನ ತಿಳಿಸುತ್ತದೆ.

ಕ್ರಿ.ಶ.1331ರ ವೀರಬಲ್ಲಾಳನ ಶಾಸನ ಮುಗಬಾಲದ ಮೊದಲ ಶಾಸನ. ತಿರುವವಲಪ್ಪರ್–ಉದ್ಯೆಯರ್–ತಿರುವರ್–ನಂದಂಡ್ಯೆಯ ಮಗ ಅಮ್ಮೈ–ನಯನನು ಕೆರೆ ಮತ್ತು ತೂಬನ್ನು ಕಟ್ಟಿಸಿದನೆಂದು ಶಾಸನ ತಿಳಿಸುತ್ತದೆ.[8] ಅಮ್ಮೈ–ನಯನನು ತಿರುಕ್ಕುಂಜಿ ನಾಡಿನ ಮೇಲ್ವಿಚಾರಕನಾಗಿದ್ದನು.

ಮುಗಬಾಲ ಈ ಸಂದರ್ಭದಲ್ಲಿ ತಿರುಕ್ಕುಂಜಿ ನಾಡಿನ ಭಾಗವಾಗಿದ್ದಿತು. ಅಮ್ಮೈ–ನಯನನು ಜನಪರ ಆಡಳಿತಗಾರನಾಗಿದ್ದಂತೆ ಕಂಡುಬರುತ್ತದೆ. ಕ್ರಿ.ಶ.1334ರ ಶಾಸನವು ಇವನ ಮರಣಾನಂತರ ಹಾಕಿಸಿದ್ದು ಹಲವಾರು ಕೆರೆಗಳನ್ನು ತೂಬುಗಳನ್ನು ಕಟ್ಟಿಸಿದನೆಂದು ಹೇಳುತ್ತದೆ.[9] ಕ್ರಿ.ಶ.1331ರ ಶಾಸನವು ಅರಸನಕೆರೆ ತೂಬಿನ ಮೇಲೆ ಇದೆ. ಕ್ರಿ.ಶ.1331ರಲ್ಲಿ ಈತ ಕಟ್ಟಿಸಿದ ಕೆರೆ ಇದೇ ಅರಸನಕೆರೆಯಾಗಿದೆ.

ಕ್ರಿ.ಶ.1334ರ ಶಾಸನದ ನಂತರ ಮುಗಬಾಲದಲ್ಲಿ ಸಗಟೂರು ಪ್ರಭುಗಳ ಶಾಸನಗಳು ದೊರೆತಿವೆ. ಕ್ರಿ.ಶ.1564ರಲ್ಲಿ ಚಿಕ್ಕರಾಯ ತಮ್ಮೇಗೌಡರಾಯನು ಸೋಮೇಶ್ವರ ದೇವಾಲಯ ಮತ್ತು ವೀರಭದ್ರ ದೇವರಿಗೆ ಅಮೃತಪಡಿಗಾಗಿ ಗ್ರಾಮಗಳನ್ನು ದಾನ ನೀಡಿದ್ದಾನೆ.[10] ತಮ್ಮ ಆಳ್ವಿಕೆಗೆ ಸಲ್ಲುವ ಹೊಸ್ಕೋಟೆ ಸೀಮೆಯ ಹುಲುರುಪಟ್ಟಡಿಯ ಮುಗಬಾಲು ಎಂಬ ಗ್ರಾಮಕ್ಕೆ ವೀರಭದ್ರಪುರ ಎಂಬ ಪ್ರತಿನಾಮವನ್ನು ನೀಡಲಾಗಿದೆ ಮತ್ತು ಮುಗಬಾಲು ಗ್ರಾಮಕ್ಕೆ ಪೂರ್ವಭಾಗದ ರಾಮಗೌಡನಹಳ್ಳಿ ಎಂಬ ಕಳಗ್ರಾಮ, ನೈರುತ್ಯ ಭಾಗದಲ್ಲಿರುವ ಕಿಳುಹೊಸಹಳ್ಳಿ ಎಂಬ ಗ್ರಾಮಗಳನ್ನು ಹಿರಣ್ಯೋದಕ ಪೂರ್ವಕವಾಗಿ ದಾನ ಕೊಡಲಾಗಿದೆ ಎಂದು ಶಾಸನದ ಪಾಠ ತಿಳಿಸುತ್ತದೆ.[11]

**ಉತ್ಸವ ಸಂಪ್ರದಾಯಗಳು**

ಈ ಶಾಸನಗಳು ದೇವಾಲಯಕ್ಕೆ ಸಲ್ಲುತ್ತಿದ್ದ ಉತ್ಸವ ಸಂಪ್ರದಾಯಗಳ ಬಗ್ಗೆಯೂ ವಿಸ್ತೃತ ಮಾಹಿತಿ ನೀಡುತ್ತವೆ. ದೇವಾಲಯದ ಪ್ರತಿ ದಿನದ ನೈವೇದ್ಯಕ್ಕೆ ನಾಲ್ಕು ನಲ್ಲಿಯಷ್ಟು ಅಕ್ಕಿ ನಿಗಧಿಪಡಿಸಿದ್ದು ನಾಲ್ಕು ನಲ್ಲಿಯಲ್ಲಿ ಪ್ರತಿ ದಿನಕ್ಕೆ ಎರಡು ಬಾರಿಯಂತೆ ಎರಡು ನಲ್ಲಿ ಅಕ್ಕಿಯಲ್ಲಿ ನೈವೇದ್ಯ ತಯಾರಿಸುವುದು. ನಂದಾದೀಪ ಸೇವೆಯಲ್ಲಿ ಬೆಳಗ್ಗೆ ಎರಡು ನಂದಾದೀಪ, ಸಂಜೆ ಐದು ನಂದಾದೀಪಗಳನ್ನು ಹಚ್ಚುವುದು. ಹೂವು–ಹಾರ, ಅಭಿಷೇಕಗಳನ್ನು ನಿತ್ಯಪೂಜೆಯಲ್ಲಿ ನಡೆಸುವುದು. ದೇವಾಲಯದ ಪೂಜೆಗೆ ಶಂಖ ಮತ್ತು ತಬಲಗಳನ್ನು ಬಳಸಿಕೊಳ್ಳುವುದು.[12]

ಕ್ರಿ.ಶ.1564ರ ಶಾಸನವು ತಿಳಿಸುವಂತೆ ರಾಮೇಗೌಡನಹಳ್ಳಿ ಮತ್ತು ಕಿಳುಹೊಸಹಳ್ಳಿಯಿಂದ ಬರುವ ಫಲಪುಷ್ಪಗಳಲ್ಲಿ ಸೋಮೇಶ್ವರ ಮತ್ತು ವೀರಭದ್ರ ದೇವರ ಅಮೃತಪಡಿ, ದೀಪಾರಾಧನೆ, ರಥೋತ್ಸವಗಳನ್ನು ಮೊದಲಾದ ಸಕಲಸೇವೆಗಳನ್ನು ಮಾಡಿಕೊಂಡು ಬರುವುದು. 12ನೇ ಶತಮಾನದಲ್ಲೇ ಆರಂಭವಾದ ಅಮೃತಪಡಿ, ದೀಪಾರಾಧನೆ ಸೇವೆಗಳು 16ನೇ ಶತಮಾನದಲ್ಲೂ ಮುಂದುವರೆದಿದೆ. 16ನೇ ಶತಮಾನದಲ್ಲಿ ರಥೋತ್ಸವ ಸೇವೆಯು ವೀರಭದ್ರ

---

7 ಮೇಲಿನದೇ, Ht-96, AD-1334

8 ಮೇಲಿನದೇ, Ht-97, AD-1331

9 ಮೇಲಿನದೇ, Ht-96, AD-1334

10 ಮೇಲಿನದೇ, Ht-94, AD-1564

11 ಮೇಲಿನದೇ, Ht-94, AD-1564

12 ಮೇಲಿನದೇ, Ht-96, AD-1334

ಸ್ವಾಮಿ ಮತ್ತು ಸೋಮೇಶ್ವರ ದೇವಾಲಯಗಳಿಗೆ ಸಲ್ಲುತ್ತಿದ್ದವು.

**ದೇವಾಲಯದ ವಾಸ್ತು ಲಕ್ಷಣಗಳು**

12ನೇ ಶತಮಾನದ ಕೊನೆಯ ಅಂಚಿನ ಈ ದೇವಾಲಯವು ಒಂದು ಗರ್ಭಗುಡಿ, ಚೌಕಾಕಾರದ ಅಂತರಾಳ, ಅರ್ಧಮಂಟಪ, ನಾಲ್ಕು ಕಂಭಗಳ ಮಂಟಪವನ್ನು ಹೊಂದಿದೆ. ಗರ್ಭಗುಡಿಯು ದಕ್ಷಿಣಕ್ಕೆ ಮುಖ ಮಾಡಿದ್ದು ಮಂಟಪದ ದ್ವಾರವು ಪೂರ್ವ ದಿಕ್ಕಿಗೆ ಇದೆ. ಗರ್ಭಗುಡಿಯ ದ್ವಾರಕ್ಕೆ ಎದುರಾಗಿ ಪ್ರಾಕಾರದಲ್ಲಿ ಅಷ್ಟಕೋನಾಕೃತಿಯ ನಂದಿಗಂಭವಿದೆ. ಈ ದೇವಾಲಯ ಷಡ್ವರ್ಗ ದೇವಾಲಯವಾಗಿದ್ದು ಗರ್ಭಗುಡಿ ಅಂತರಾಳ, ಅರ್ಧಮಂಟಪ 12ನೇ ಶತಮಾನದ ರಚನೆಗಳಾಗಿದ್ದು ಮಂಟಪವು ನಂತರದಲ್ಲಿ ನಿರ್ಮಾಣವಾಗಿದೆ. ಗರ್ಭಗುಡಿ ಅಂತರಾಳ, ಸುಖನಾಸಿಗಳ ಪ್ರಸ್ತರಕ್ಕೂ ನವರಂಗದ ಪ್ರಸ್ತರಕ್ಕೂ ವ್ಯತ್ಯಾಸವಿದೆ. ಅಲ್ಲದೆ ಮಂಟಪದ ಕಂಭಗಳು ಚಿತ್ರಕಾಂಡ ಕಂಭಗಳಾಗಿವೆ. ಕ್ರಿ.ಶ.1564ರ ಮುಗಬಾಲದ ಸಗಟೂರು ಪ್ರಭುಗಳ ಶಾಸನದಲ್ಲಿ ಸೋಮೇಶ್ವರ ದೇವಾಲಯದ ಪ್ರಸ್ತಾಪವಿದ್ದು ಈ ಸಂದರ್ಭದಲ್ಲಿ ನವರಂಗ ನಿರ್ಮಾಣವಾಗಿದೆ. ಈ ದೇವಾಲಯವನ್ನು ಊರ್ಧ್ವಮುಖ ಕ್ರಮ ಮತ್ತು ತಿರ್ಯಙ್ಮುಖಕ್ರಮ ಎರಡೂ ಕ್ರಮದಲ್ಲಿ ಅಧ್ಯಯನ ನಡೆಸಬಹುದು.

**ಅಧಿಷ್ಠಾನ**

ದೇವಾಲಯವು ಪಾದಬಂಧ ಅಧಿಷ್ಠಾನದ ಮೇಲೆ ನಿಂತಿದೆ. ಬೆಂಗಳೂರಿನ ಸುತ್ತಮುತ್ತಲಿನ ದೇವಾಲಯಗಳಲ್ಲಿ ಶೇ.90 ದೇವಾಲಯಗಳು ಪಾದಬಂಧ ಅಧಿಷ್ಠಾನವನ್ನು ಹೊಂದಿವೆ. ಈ ಅಧಿಷ್ಠಾನದ ರಚನೆಯು ಸರಳವಾಗಿದ್ದು ಸಧೃಡವಾಗಿರುವುದರಿಂದ ಈ ಮಾದರಿಯ ಅಧಿಷ್ಠಾನಗಳು ಹೆಚ್ಚಾಗಿ ಕಾಣಸಿಗುತ್ತವೆ. ಈ ದೇವಾಲಯದ ಅಧಿಷ್ಠಾನವು ಉಪಾನ–ಜಗತಿ–ಕಂಠ–ತ್ರಿಪಟ್ಟಕುಮುದ–ಗಳ–ಪಟ್ಟಿಕಾ–ಗಳ–ಪ್ರತೀ–ವಾಜನಗಳನ್ನು ಒಳಗೊಂಡಿದೆ. ಕಂಪವು ಗಳ ಮತ್ತು ಪಟ್ಟಿಕಾ ಗಳ ನಡುವೆ ಕಾಣಿಸಿಕೊಂಡಿದೆ. 11ನೇ ಶತಮಾನದ ಹೊತ್ತಿಗೆ ಪಾದಬಂಧ ಅಧಿಷ್ಠಾನದ ರಚನೆಯಲ್ಲಿ ಬದಲಾವಣೆಗಳು ಕಾಣಿಸಿಕೊಂಡಿದೆ. ಒಂದು ಗಳದ ಬದಲಾಗಿ ಪಟ್ಟಿಕೆಯ ಎರಡೂ ಬದಿಗಳಲ್ಲಿಯೂ ಗಳಗಳು ರಚನೆಯಾದವು. ಇಲ್ಲಿಯ ಗಳ ಭಾಗದಲ್ಲಿ ಗಳಪಾದಗಳು ಮತ್ತು ಪ್ರತೀಯ ಕೆಳಭಾಗದಲ್ಲಿ ಅಧೋಪದ್ಮದ ಅಲಂಕಾರವಿದೆ. ಭಿತ್ತಿಯಲ್ಲಿನ ಕೋಷ್ಟಗಳು ಪ್ರತೀಯನ್ನು ಸೀಳಿಕೊಂಡು ಪಟ್ಟಿಕಾದ ಮೇಲೆ ನಿಂತಿವೆ.

**ಭಿತ್ತಿ**

ಭಿತ್ತಿಯು ಭಿತ್ತಿಪಾದ, ಕೋಷ್ಟ, ತೋರಣ, ಪುರಾಣದ ಕಥಾನಕ ಮತ್ತು ಸಾಮಾಜಿಕ ಜನ ಜೀವನದ ಉಬ್ಬುಶಿಲ್ಪಗಳಿಂದ ಅಲಂಕೃತಗೊಂಡಿದೆ. ಭಿತ್ತಿಪಾದ(ಕುಡ್ಯಸ್ತಂಭ)ಗಳು ಭಾರವಾಹಕವಾಗಿರದೆ ಇವುಗಳನ್ನು ಅಲಂಕಾರದ ದೃಷ್ಟಿಯಿಂದ ರಚಿಸಲಾಗಿದೆ. ಭಿತ್ತಿಪಾದಕ್ಕೆ ಪೀಠವಿಲ್ಲ. ದಂಡದ ಮೇಲೆ ಹೂಬಳ್ಳಿಗಳ ಅಲಂಕಾರವಿದೆ. ದಂಡವು ಬ್ರಹ್ಮಕಾಂತವಾಗಿದ್ದು ದಂಡದ ಮೇಲ್ಭಾಗದಲ್ಲಿ ಲಾಸುಮವಿದೆ. ಲಾಸುಮದ ಹೊಟ್ಟೆಯು ಗೋಳಾಕಾರದಲ್ಲಿದ್ದು, ಲಾಸುಮದ ಬಾಯಿ ದಂಡದ ಆಕಾರ ಪಡೆದಿದ್ದು ಚೌಕಾಕಾರದಲ್ಲಿದೆ. ಲಾಸುಮದ ಕೆಳಗಿನ ತಾಟಿಕಾದಿಂದ ಮಣಿಹಾರಗಳು ದಂಡದ ಮೇಲೆ ಇಳಿದಿವೆ. ಲಾಸುಮದ ಮೇಲಿನ ಕುಮುದ ಧಾರಾವೃತ್ತ ಕುಮುದವಾಗಿದ್ದು, ಮಂಡಿಯು ಪುಷ್ಪದಳ ಅಲಂಕಾರವನ್ನು ಹೊಂದಿದ್ದು ಫಲಕ ಚೌಕಾಕಾರದಲ್ಲಿದೆ. ವೀರಕಂಠದ ಮೇಲಿನ ಪೋತಿಕೆ ಆಧಾರಪೋತಿಕೆಯಾಗಿದೆ. ಭಿತ್ತಿಯ ಕರ್ಣಗಳಲ್ಲಿನ ಭಿತ್ತಿಪಾದಗಳಿಗೆ ಮಾತ್ರ ಪೂರ್ಣ ಪ್ರಮಾಣದ ಪೋತಿಕೆಯನ್ನು ಕೊಡಲಾಗಿದೆ. ಉಳಿದ ಭಿತ್ತಿಪಾದಗಳಿಗೆ ಎರಡು ದಿಕ್ಕಿಗೆ ಮುಷ್ಠಿಬಂಧ ಪೋತಿಕೆಗಳಿವೆ. ಲಾಸುಮದ ಕೆಳಭಾಗವು ಪದ್ಮದಳಗಳಿಂದಲೂ ಪೂರ್ಣ ಲಾಸುಮವು ಉದ್ದ ಗೆರೆಗಳಿಂದಲೂ ಅಲಂಕೃತಗೊಂಡಿದೆ.

**ಕೋಷ್ಟ**

ಗರ್ಭಗುಡಿ, ಅಂತರಾಳ, ಮಂಟಪದ ಭಿತ್ತಿಗಳಲ್ಲಿ ಕೋಷ್ಟಗಳನ್ನು ಕಾಣಬಹುದು. ಅರ್ಧಭಿತ್ತಿಪಾದಗಳ ಮಧ್ಯೆ ಕೋಷ್ಟಗಳಿವೆ. ಕೋಷ್ಟದ ಅರ್ಧಭಿತ್ತಿಪಾದಗಳು ಅಧಿಷ್ಠಾನದ ಪಟ್ಟಿಕಾದ ಮೇಲಿಂದ ಆರಂಭವಾಗಿದೆ. ಅರ್ಧಭಿತ್ತಿಪಾದಗಳು ಹೂವು–ಬಳ್ಳಿಗಳಿಂದ, ಮಾಲಗಳಿಂದ ಅಲಂಕೃತವಾಗಿದ್ದು ಲಾಸುಮದ ಮೇಲೆ ಧಾರಾವೃತ್ತ ಕುಮುದ ಮತ್ತು ಮಂಡಿ ಫಲಗೈಗಳಿವೆ. ಇದರ ಮೇಲೆ ಶಾಲಾ ತೋರಣವಿದೆ. ಕೋಷ್ಟವು ಖಾಲಿ ಇವೆ. ತೋರಣದಲ್ಲಿ ವಾಜನದ ಮೇಲೆ ಕಪೋತವಿದ್ದು, ಕಪೋತದಲ್ಲಿ ಮಹಾ ಪುಷ್ಪದಳಗಳ ಕೆತ್ತನೆ ಇದೆ. ಕಪೋತದ ಮೇಲ್ಭಾಗದಲ್ಲಿ ಕೀರ್ತಿಮುಖದ ಬಾಯಿಯಿಂದ ಹೂಬಳ್ಳಿಗಳ ಅಲಂಕಾರ ಕಪೋತದ ಕೆಳತುದಿಯವರೆಗೂ ಬಂದಿದೆ. 12ನೇ ಶತಮಾನದ ಕೊನೆಯ ಹೊತ್ತಿಗೆ ಕಪೋತಗಳು ಹೆಚ್ಚು ಅಲಂಕೃತವಾಗಿದ್ದು ಕಪೋತದ ಮೇಲಿನ ವಾಜನ ಮತ್ತು ಪ್ರತೀಯ ಮೇಲೆ ಮತ್ತೊಂದು ಕಪೋತವಿದೆ. ನಾಸಿಯ ಗದಾಭಾಗವು ಕುದುರೆಯ ಗೊರಸಿನ ಆಕಾರಕ್ಕಿಂತ ದೊಡ್ಡದಿದ್ದು ಒಳಸರಿದಿದೆ. ಗಧಾಭಾಗದಲ್ಲಿ ಪುಟ್ಟ ಗುಡಿಯನ್ನು ಕೆತ್ತಲಾಗಿದೆ. ನಾಸಿಯ ಮೇಲ್ಭಾಗದಲ್ಲಿ ಕೀರ್ತಿಮುಖವಿದೆ. ಕಮಾನಿನ ಮೇಲೆ ಗ್ರೀವವಿದ್ದು ಗ್ರೀವದಲ್ಲಿ ಕಳಸಗಳಿವೆ. ಕಮಾನಿನ ತುದಿಗಳಲ್ಲಿ ಹಸುವಿನ ಕೊಂಬು ಮತ್ತು ಗೇಬಲ್ ನಂತಹ ರಚನೆಗಳನ್ನು ಕಾಣಬಹುದು.

12ನೇ ಶತಮಾನದ ಕೊನೆಯ ಹೊತ್ತಿಗೆ ಭಿತ್ತಿಯಲ್ಲಿ ಉಬ್ಬುಶಿಲ್ಪಿಗಳು ಕಾಣಿಸಿಕೊಂಡವು. ಭಿನ್ನಮಂಗಲದ ಮುಕ್ತಿನಾಥೇಶ್ವರ ದೇವಾಲಯದಲ್ಲಿ 10ನೇ ಶತಮಾನದ ಕೊನೆ ಮತ್ತು 11ನೇ ಶತಮಾನದ ಆರಂಭದಲ್ಲಿಯೇ ಭಿತ್ತಿಯ ಮೇಲೆ ಯೋಗಿನಿಯರನ್ನು ಕೆತ್ತಿರುವುದನ್ನು ನೋಡಬಹುದು. ಆದರೆ ಮಹಾಕಾವ್ಯಗಳ ಕಥಾನಕಗಳು, ಪುರಾಣ ಕಥಾನಕಗಳು, ಸಾಮಾಜಿಕ ಚಿತ್ರಣಗಳು 12ನೇ ಶತಮಾನದ ಕೊನೆಯ ಘಟ್ಟದಲ್ಲಿ ಕಾಣಿಸಿಕೊಂಡವು. ಈ ದೇವಾಲಯದಲ್ಲಿ ಅಧಿಷ್ಠಾನದ ಪ್ರತೀಯ ಮೇಲ್ಭಾಗದಲ್ಲಿ ಬೇಡರಕಣ್ಣಪ್ಪನ ಕಥಾನಕ, ಶಿವಲಿಂಗವನ್ನು ತಬ್ಬಿನಿಂತ ಪಾರ್ವತಿ, ಶಿವಲಿಂಗದ ಜೊತೆ ಕಾಮಧೇನು, ಗಂಡಬೇರುಂಡನ ಜೊತೆ ಸಿಂಹ, ಕಾಳಿಂಗ ಮರ್ಧನ ನೃತ್ಯಗಣಪ ಶಿಲ್ಪಗಳನ್ನು ಬಿಡಿಸಲಾಗಿದೆ. ಬಿತ್ತನೆ ಕೆಲಸದಲ್ಲಿ ತೊಡಗಿರುವ ಮಹಿಳೆ ಮತ್ತು ಪುರುಷರ ಕೆತ್ತನೆಯೂ ಬಿತ್ತಿಯಲ್ಲಿದೆ. ಇದರೊಂದಿಗೆ ಹೆಂಡತಿಯನ್ನು ಹೊತ್ತು ಓಡುತ್ತಿರುವ ಪುರುಷರ ಕೆತ್ತನೆಯೂ ಇದೆ. ಗರ್ಭಗುಡಿಯ ಎದುರಿಗಿರುವ ಮಂಟಪದ ಭಿತ್ತಿಯಲ್ಲಿನ ಕೋಷ್ಟದಲ್ಲಿ ತುರ್ಯಾಶ್ರ ಮಾದರಿಯ ಜಾಲವಾತಾಯನವಿದೆ. ಕೋಷ್ಟವು ಶಾಲಾ ತೋರಣದಿಂದ ಅಲಂಕೃತಗೊಂಡಿದೆ.

**ಪ್ರಸ್ತರ**

ಪಾದವರ್ಗ ಮತ್ತು ಪ್ರಸಾದ ವರ್ಗಗಳು ಸೇರುವ ಭಾಗವೇ ಪ್ರಸ್ತರ. ಪಾದವರ್ಗ ಎಂದರೆ ಅಧಿಷ್ಠಾನ, ಭಿತ್ತಿ. ಪ್ರಸಾದ ವರ್ಗಗಳೆಂದರೆ ಗ್ರೀವ, ಶಿಖರ, ಕಳಸ. ಪ್ರಸ್ತರ ವರ್ಗವು ಪಾದವರ್ಗ ಅಂದರೆ ಭೂಮಿ, ಪ್ರಸಾದ ವರ್ಗ ಎಂದರೆ ಆಕಾಶ ಸೇರುವ ಭಾಗವೆಂದು ತಿಳಿಯಲಾಗಿದೆ. ಈ ದೇವಾಲಯದ ಪ್ರಸ್ತರದಲ್ಲಿ ಉತ್ತರ–ವಾಜನ–ವಲ್ಲಭಿ–ಕಪೋತ–ಆಂತರೀಯ–ಪ್ರತೀ ಇವೆ. ಉತ್ತರವು ಖಾಲಿ ಇದ್ದು ವಾಜನವನ್ನು ಪದ್ಮಮಾಲಗಳಿಂದ ಅಲಂಕರಿಸಲಾಗಿದೆ. ವಾಜನವು ಸಹಜವಾಗಿ ಹಂಸಮಾಲ, ಪದ್ಮಮಾಲಗಳಿಂದ ಅಲಂಕೃತವಾಗಿರುತ್ತದೆ. ಕಪೋತವು ಪುಷ್ಪದಳ ಅಲಂಕಾರವನ್ನು ಹೊಂದಿದ್ದು, ನಿರ್ದಿಷ್ಟ ಅಂತರಗಳಲ್ಲಿ ನಾಸಿ ಇದೆ. ಕೆತ್ತನೆಯು ಸ್ಪಷ್ಟವಾಗಿಲ್ಲ. ಪ್ರತಿಯೊಂದು ಭಿತ್ತಿಪಾದದ ಮೇಲೂ ಕೀರ್ತಿಮುಖ ಬರುವಂತೆ ಅಲಂಕರಿಸಲಾಗಿದೆ. ಆಂತರಿಯ ಭಾಗದಿಂದ ಸಿಂಹ ಹೊರಬರುವಂತೆ ಕೆತ್ತಲಾಗಿದೆ. ಸಿಂಹದ ದೇಹವು ಆಂತರೀಯದಿಂದ ಹೊರಬಂದಿದ್ದು ಸಿಂಹವು ಬಾಯಿ ತೆರೆದು ಘರ್ಜಿಸುತ್ತಿರುವಂತೆ, ಕೋಪದಿಂದ ಘರ್ಜಿಸಿದ ಸಿಂಹದ ಕೇಸರಿಯು ಕೆರಳಿದಂತೆ ಚಿತ್ರಿಸಲಾಗಿದೆ.

ಕಪೋತದ ಮೇಲ್ಭಾಗದವರೆಗೂ, ಆಂತರೀಯ, ಪ್ರತೀಯ ಕರ್ಣಗಳಲ್ಲಿ ಭಿತ್ತಿಪಾದಗಳ ಪೋತಿಕೆಯು ಮುಂದುವರೆದಿದೆ. ಮಂಟಪದ ಪ್ರಸ್ತರದ ಆಂತರೀಯ ಮತ್ತು ಪ್ರತೀಗಳಲ್ಲಿ ಸಿಂಹ ಮಾಲೆ ಇಲ್ಲ. ಪ್ರತೀಯಲ್ಲಿ ಊರ್ಧ್ವಪದ್ಮಗಳನ್ನು ಬಿಡಿಸಲಾಗಿದೆ. ದೇವಾಲಯದ ಮಹಾದ್ವಾರದ ಮುಂಭಾಗದ ಪ್ರಸ್ತರದ ಕಪೋತ ಭಾಗದ ಮೇಲ್ಭಾಗವನ್ನು ಹೊಡೆದು ಹಾಕಲಾಗಿದೆ.

ಈ ದೇವಾಲಯದಲ್ಲಿ ಗರ್ಭಗುಡಿಯ ದ್ವಾರ, ಅಂತರಾಳದ ದ್ವಾರ ಮತ್ತು ಮಂಟಪದ ಮಹಾದ್ವಾರಗಳಿವೆ.

**ಗರ್ಭಗುಡಿಯ ದ್ವಾರ**

ಈ ದ್ವಾರದ ಹೊಸ್ತಿಲು ಸರಳವಾಗಿದ್ದು, ದ್ವಾರಬಂಧದ ಎರಡೂ ಪಕ್ಕದಲ್ಲಿ ಭಿತ್ತಿಪಾದಗಳಿವೆ. ಭಿತ್ತಿಯಲ್ಲಿನ ಭಿತ್ತಿಪಾದಗಳಂತೆ ಇವೂ ಸಹ ಅಲಂಕೃತವಾಗಿವೆ. ದ್ವಾರವು ದ್ವಿಶಾಖಾ ದ್ವಾರಬಂಧಗಳನ್ನು ಹೊಂದಿದೆ. ಮೊದಲನೇ ಶಾಖಾವು ಭಿತ್ತಿಪಾದದ ದಂಡವಾಗಿದೆ. ಎರಡನೇ ಶಾಖಾದಲ್ಲಿ ಹೂಬಳ್ಳಿಯ ಅಲಂಕಾರವಿದೆ. ದ್ವಾರಪಾಲಕರಿರಬೇಕಿದ್ದ ಸ್ಥಳ ಖಾಲಿ ಇದೆ. ಲಲಾಟಬಿಂಬದಲ್ಲಿ ಉಮಾ ಸಹಿತ ಪರಮೇಶ್ವರನ ಅಸ್ಪಷ್ಟ ಆಕೃತಿ ಇದೆ.

**ಅಂತರಾಳದ ದ್ವಾರ**

ಅಂತರಾಳದ ದ್ವಾರವನ್ನೂ ಸಹ ಕೋಷ್ಠದ ರೀತಿ ಅಲಂಕರಿಸಲಾಗಿದೆ. ದ್ವಾರದ ಅಕ್ಕಪಕ್ಕ ಅಧಿಷ್ಠಾನದ ಭಾಗಗಳು ಕಾಣುತ್ತವೆ. ಅಧಿಷ್ಠಾನದ ಮೇಲಿಂದ ಹೊರಟ ಅರ್ಧಭಿತ್ತಿಪಾದಗಳು ಲಾಸುಮ–ಕುಮುದ–ಮಂಡಿ ಪಲಗೈಯನ್ನು ಹೊಂದಿದೆ. ಎರಡೂ ಅರ್ಧಭಿತ್ತಿಪಾದಗಳನ್ನು ಉತ್ತರವು ಸೇರಿಸಿದೆ. ವಲ್ಲಭಿಯ ಮೇಲೆ ಕಪೋತವಿದೆ. ಪದೇಪದೇ ಬಣ್ಣ ಬಳಿಯಲಾಗಿರುವುದರಿಂದ ಅಲಂಕಾರಗಳು ಸ್ಪಷ್ಟವಾಗಿಲ್ಲ. ಕಪೋತದ ಮಗ್ಗುಲುಗಳಲ್ಲಿ ಕೀರ್ತಿ ಮುಖವಿದೆ. ಕೀರ್ತಿಮುಖದಿಂದ ಹೊರಬರುತ್ತಿರುವ ಹೂಬಳ್ಳಿಗಳ ಕೆತ್ತನೆ ಸ್ಪಷ್ಟವಾಗಿದೆ. ಕಪೋತದ ಮೇಲಿನ ವಾಜನದ ಮೇಲಿನ ಗಳವು ಗಳಪಾದಗಳಿಂದ ಅಲಂಕೃತಗೊಂಡಿದೆ. ಇದರ ಮೇಲಿನ ಕಪೋತದಲ್ಲಿ ನಾಸಿಗಳಿವೆ. ಇಲ್ಲಿ ಕೀರ್ತಿಮುಖದ ಗಧಾದ ಕಂಠ ಸ್ಪಷ್ಟವಾಗಿದ್ದು, ಗಧಾ ಭಾಗವು ಹೆಚ್ಚು ಒಳಹೋಗಿದ್ದು ಅಲ್ಲಿ ಪುಟ್ಟ ಗುಡಿ ಇದೆ. ಪ್ರತೀಯ ಮೇಲ್ಭಾಗದಲ್ಲಿ ಕಳಸಗಳಿವೆ. ಪ್ರಸ್ತರದ ಉತ್ತರದ ಮೇಲಿನ ವಾಜನದಲ್ಲಿನ ಪುಷ್ಪದಳ ಅಲಂಕಾರಗಳು ದೇವಾಲಯದ ಒಳಭಾಗದ ಮೇಲ್ಛಾವಣಿಯ ಮೂಲೆಗಳಲ್ಲಿಯೂ ಕಾಣುತ್ತವೆ.

**ಮಂಟಪದ ಮಹಾದ್ವಾರ**

ದ್ವಾರದ ಹೊಸ್ತಿಲು ಭದ್ರ ಮಾದರಿಯಲ್ಲಿದೆ. ದ್ವಾರಬಂಧವು ದ್ವಿಶಾಖಾವಾಗಿದ್ದು ಮೊದಲನೇ ಶಾಖಾವು ಅರ್ಧಭಿತ್ತಿಪಾದದ ದಂಡವಾಗಿದ್ದು ಎರಡನೇ ಶಾಖಾವು ಪದ್ಮಮಾಲೆ, ಮಣಿಮಾಲೆಗಳಿಂದ ಅಲಂಕೃತಗೊಂಡಿದೆ. ಲಲಾಟಬಿಂಬದಲ್ಲಿ ಉಮಾಮಹೇಶ್ವರನಿದ್ದಾನೆ. ಭಿತ್ತಿಪಾದಗಳ ದಂಡವು ಅಧಿಷ್ಠಾನದ ಭಾಗಗಳ ಆಕಾರವನ್ನೂ ಪಡೆದುಕೊಂಡಿದೆ. ಇದರ ತಳಭಾಗದಲ್ಲಿ ತ್ರಿಭಂಗಿಯಲ್ಲಿ ನಿಂತ ದ್ವಾರಪಾಲಕರ ಕೆತ್ತನೆಗಳಿವೆ.

ಮಂಟಪದ ಮಹಾದ್ವಾರವು ಸಹ ಅಂತರಾಳದ ದ್ವಾರದಂತೆ ಅರ್ಧಭಿತ್ತಿಪಾದಗಳನ್ನು ಹೊಂದಿದೆ. ಕೋಷ್ಠದ ಭಿತ್ತಿಪಾದಗಳಂತೆ ಇವೂ ಅಲಂಕೃತವಾಗಿವೆ. ಭಿತ್ತಿಪಾದಗಳನ್ನು ಉತ್ತರವು ಒಂದುಗೂಡಿಸಿದ್ದು ಅದರ ಮೇಲೆ ವಾಜನ, ಕಪೋತವಿದೆ. ಕಪೋತದಲ್ಲಿ ಕೀರ್ತಿಮುಖಗಳಿದ್ದು ಕಪೋತದ ಮೇಲೆ ರೇಖಾಗಣಿತದ ಮಾದರಿಗಳನ್ನು ಬಿಡಿಸಲಾಗಿದೆ. ಕಪೋತದ ಮೇಲಿನ ವಾಜನದ ಮೂಲೆಗಳಲ್ಲಿ ಸಿಂಹವಿದೆ. ಆಂತರೀಯ ಭಾಗದಿಂದ ಗಂಧರ್ವರ ದೇಹ ಹೊರಬಂದು ಮೇಲ್ಭಾಗದ ನಾಸಿಯ ಗಧಾಭಾಗದಲ್ಲಿ ಮುಖ ಎತ್ತಿದ್ದಾರೆ. ಮಧ್ಯಭಾಗದ ನಾಸಿಯು ಮಹಾನಾಸಿಯಾಗಿದ್ದು ಗಧಾದ ಕಂಠವು ಸ್ಪಷ್ಟವಾಗಿದೆ. ಇಲ್ಲಿ ಗಧಾಭಾಗವು ಕುದುರೆಯ ಗೊರಸಿನ ಆಕಾರಕ್ಕೆ ಬದಲಾಗಿ ಚೌಕಾಕಾರದಲ್ಲಿದ್ದು

ಇಲ್ಲಿ ಪುಟ್ಟ ಗುಡಿ ಇದೆ. ಅಕ್ಕಪಕ್ಕದ ನಾಸಿಗಳು ಚಿಕ್ಕವಿದ್ದು ಅಂತರೀಯದಿಂದ ಹೊರಬಂದ ಗಂಧರ್ವರ ಮುಖಗಳಿವೆ. ಇದರ ಮೇಲಿನ ಪ್ರತೀಯು ಕಳಸವನ್ನು ಹೊಂದಿದ್ದು ಪ್ರತೀಯ ಮೂಲೆಗಳಲ್ಲಿ ಹಸುವಿನ ಕೊಂಬಿನಂತಹ ರಚನೆ ಇದೆ.

**ಧ್ವಜಸ್ತಂಭ**

ಧ್ವಜಸ್ತಂಭವು ಅಷ್ಟಕೋನಾಕೃತಿಯಲ್ಲಿದೆ. ಇಲ್ಲಿ ಘನಭ ಅಲಂಕಾರವಿಲ್ಲ. ಅಷ್ಟಕೋನಾಕೃತಿಯ ನಾಲ್ಕು ಮೂಲೆಗಳಲ್ಲಿ ಕುಬ್ಜರು ಕೈಮುಗಿದು ನಿಂತಿದ್ದಾರೆ. ಧ್ವಜಸ್ತಂಭದ ಮಧ್ಯಭಾಗವನ್ನು ಚೌಕಾಕಾರವನ್ನಾಗಿ ಮಾಡಿ ಪದ್ಮದಳ, ಪುಷ್ಪಪಟ್ಟಿಕೆಯನ್ನು ಬಿಡಿಸಿ ಅದರ ಮೇಲೆ ಮತ್ತೆ ಅಷ್ಟಕೋನದ ದಂಡ ಮುಂದುವರೆದಿದೆ. ಕಂಭದ ಮೇಲ್ತುದಿಯಲ್ಲಿ ಲಾಸುಮದ ಕೆಳಗೆ ಚೌಕಾಕಾರದ ಘನಭವನ್ನು ಮಾಡಿ ಮಣಿಹಾರಗಳನ್ನು ಕೆತ್ತಲಾಗಿದೆ. ಇದರ ಮೇಲೆ ಅಲಂಕೃತವಾದ ಲಾಸುಮದ ಹೊಟ್ಟೆಯು ಪೂರ್ಣ ಗೋಳಾಕಾರದಲ್ಲಿದ್ದ ಲಾಸುಮದ ಕಂಠವು ಚೌಕಾಕಾರದಲ್ಲಿದೆ. ಇದರ ಮೇಲೆ ಮಂಡಿ ಮತ್ತು ಫಲಕವಿದೆ.

**ಕಂಭಗಳು**

ಮಂಟಪದಲ್ಲಿ ನಾಲ್ಕು ಸುಂದರ ಚಿತ್ರಕಾಂಡ ಕಂಭಗಳಿವೆ. ವಿಜಯನಗರ ಶೈಲಿಯ ಕಂಭಗಳಂತೆ ದೈತ್ಯಾಕಾರದಲ್ಲಿಲ್ಲ. ಮಂಟಪವು ಪುಟ್ಟದಾಗಿರುವುದ ರಿಂದ ಮಂಟಪದ ಅಳತೆಗೆ ತಕ್ಕಂತೆ ಸಣ್ಣ ಗಾತ್ರದ ಚಿತ್ರಕಾಂಡ ಕಂಭಗಳನ್ನು ನಿಲ್ಲಿಸಲಾಗಿದೆ. ಚಿತ್ರಕಾಂಡ ಕಂಭಗಳು ಎರಡೂ ದಿಕ್ಕಿಗೆ ಪುಷ್ಪಪೋತಿಕೆಯನ್ನು ಹೊಂದಿವೆ. ಇವುಗಳ ಘನಭಗಳಲ್ಲಿ ಸುಂದರವಾದ ಸ್ಫುಟವಾದ ಉಬ್ಬುಶಿಲ್ಪಗಳಿವೆ. ಹೆಂಡತಿ ಮಗುವಿನೊಡನೆ ಬೇಟೆಗೆ ಹೊರಟ ಪುರುಷ, ನೃತ್ಯಗಾರ್ತಿಯರು, ಗಣಪತಿ, ತಪಸ್ಸಿಗೆ ಕುಳಿತ ವಿಷ್ಣು, ತ್ರಿಭಂಗದಲ್ಲಿರುವ ಕಾಳಿಂಗ ಮರ್ದನ ಕೃಷ್ಣ, ನಂದಿ ಸಮೇತರಾಗಿ ನಿಂತ ಶಿವ, ಹಂಸದ ಮೇಲೆ ಕುಳಿತ ಬ್ರಹ್ಮ, ಕಾಳ ಭೈರವ, ಪತ್ನಿ ಸಮೇತ ಗಣಪ, ನಂದಿ ಮೇಲೆ ಪಾರ್ವತಿ ಸಮೇತ ಹೊರಟ ಶಿವ, ಇಂತಹ ಸುಂದರ ಕೆತ್ತನೆಗಳು ಇಲ್ಲಿವೆ. ಕಂಭದ ಗ್ರೀವದ ಭಾಗದಲ್ಲಿಯೂ ಕೆತ್ತನೆಗಳಿವೆ.

**ವಿತಾನ (ಮುಚ್ಚಿಗೆ)**

ಅರ್ಧಮಂಟಪದ ಮುಚ್ಚಿಗೆಯಲ್ಲಿ ಪುಷ್ಪವಿದೆ. ಗರ್ಭಗುಡಿ, ಅಂತರಾಳದ ಮುಚ್ಚಿಗೆಗಳು ಖಾಲಿ ಇವೆ. ಮಂಟಪದ ಮೇಲ್ಭಾವಣಿಯನ್ನು ಕಿತ್ತು ಹಾಕಿ ಗಾಳಿ ಬೆಳಕು ಆಡಲು ವ್ಯವಸ್ಥೆ ಮಾಡಲಾಗಿದೆ. ಇದರ ಮೇಲೆ ಕಬ್ಬಿಣದ ಕಂಬಿ ಮತ್ತು ಗಾರೆ ಬಳಸಿ ಎತ್ತರದ ರಚನೆ ಮಾಡಲಾಗಿದೆ. ಈ ಸಂದರ್ಭದಲ್ಲಿಯೇ ಮಂಟಪದ ಮಹಾದ್ವಾರ ಮೇಲಿನ ಪ್ರಸ್ತರದ ಕಪೋತದ ಮೇಲ್ಭಾಗವನ್ನು ಕಿತ್ತುಹಾಕಿ ಗಾರೆಯ ಪುಟ್ಟ ಗೋಡೆ ಕಟ್ಟಲಾಗಿದೆ.

**ಹರ ಮತ್ತು ಶಿಖರ**

ದೇವಾಲಯದ ರಚನೆಯನ್ನು ಗಮನಿಸಿದರೆ ಖಂಡಿತವಾಗಿಯೂ ದೇವಾಲಯ ಶಿಖರವನ್ನು ಹೊಂದಿತ್ತೆನ್ನುವುದು ಸ್ಪಷ್ಟವಾಗುತ್ತದೆ. ಸಂದರ್ಶನ ಸಂದರ್ಭದಲ್ಲಿ ಹೊಸ ಶಿಖರ ನಿರ್ಮಿಸಿರುವುದನ್ನು ತಿಳಿಸಿರುತ್ತಾರೆ. ದೇವಾಲಯದ ಮೇಲ್ಕಟ್ಟಡ (ಪ್ರಸಾದವರ್ಗ) ಹಲವು ಬದಲಾವಣೆಗಳಿಗೆ ಒಳಗಾಗಿದೆ.

**ಉಬ್ಬು ಶಿಲ್ಪಗಳು**

ದೇವಾಲಯದ ಮಂಟಪ, ಅಂತರಾಳ, ಗರ್ಭಗುಡಿಗಳ ಭಿತ್ತಿಗಳಲ್ಲಿ ಹಲವಾರು ಸಾಮಾಜಿಕ ಘಟನೆ ಮತ್ತು ಕಥಾನಕಗಳ ಉಬ್ಬುಶಿಲ್ಪಗಳಿವೆ. ಶಿಲ್ಪಗಳು ಅಧಿಷ್ಠಾನದ ಮೇಲಿನ ಪ್ರತಿಯ ಮೇಲ್ಭಾಗದಲ್ಲಿ ಪೀಠದ ಮೇಲೆ ನಿಂತಿವೆ. ಇಂತಹ ಶಿಲ್ಪಗಳನ್ನು ನೆಲಮಂಗಲದ ಭಿನ್ನಮಂಗಲದ ಮುಕ್ತಿನಾಥೇಶ್ವರ, ಹೊಸಕೋಟೆಯ ದೊಡ್ಡಹುಲ್ಲೂರಿನ ಈಶ್ವರ ದೇವಾಲಯಗಳಲ್ಲೂ ಕಾಣಬಹುದು. ಉಬ್ಬುಶಿಲ್ಪಗಳು 12–13ನೇ ಶತಮಾನದ ದೇವಾಲಯಗಳಲ್ಲಿ ಕಾಣಸಿಗುತ್ತವೆ.

**ನೃತ್ಯಭಂಗಿಯಲ್ಲಿಯ ಗಣಪತಿ**

ಗಣಪತಿಯು ಎಡಗಾಲನ್ನು ಮೇಲೆತ್ತಿ ಬಲಗಾಲನ್ನು ನೆಲಕ್ಕೆ ಊರಿ ನೃತ್ಯಭಂಗಿಯಲ್ಲಿದ್ದಾನೆ. ಚತುರ್ಭುಜಿಯಾದ ಗಣಪನ ಪಕ್ಕ ಡೊಳ್ಳುಹೊಟ್ಟೆಯ ಕುಬ್ಜನು ತಲೆಯ ಮೇಲೆ ತುಂಬಿದ ತಟ್ಟೆಯನ್ನು ಹೊತ್ತು ನಿಂತಿದ್ದಾನೆ. ಗಣಪ ತನ್ನ ಹಿಂಭಾಗದ ಎಡಗೈಯನ್ನು ಈ ಕುಬ್ಜನ ತಲೆ ಮೇಲಿನ ತಟ್ಟೆಯಲ್ಲಿ ವಸ್ತುವನ್ನು ತೆಗೆದುಕೊಳ್ಳುತ್ತಿರುವಂತಿದೆ. ಗಣಪತಿಯ ಸೊಂಟದ ವಸ್ತ್ರ ಹರಡಿಕೊಂಡಿದೆ.

**ಕಾಳಿಂಗ ಮರ್ಧನ ಕೃಷ್ಣ ಮತ್ತು ವೇಣುಗೋಪಾಲ**

ನೃತ್ಯ ಗಣಪತಿ ಉಬ್ಬುಶಿಲ್ಪದ ಎಡಭಾಗದಲ್ಲಿ ಕಾಳಿಂಗ ಮರ್ಧನದ ಕೆತ್ತನೆ ಇದೆ. ಬಹಳಷ್ಟು ಕಡೆ ಕೃಷ್ಣನ ಕಾಳಿಂಗ ಮರ್ಧನ ಕೆತ್ತನೆಯು ತ್ರಿಭಂಗಿಯಲ್ಲಿರುವುದು ಕಾಣಸಿಗುತ್ತದೆ. ಆದರೆ ಇಲ್ಲಿ ಕೃಷ್ಣ ದ್ವಿಭಂಗಿಯಲ್ಲಿದ್ದು ಎಡಗಾಲನ್ನು ನೆಲಕ್ಕೆ ಊರಿ ಬಲಗಾಲನ್ನು ಮೇಲೆತ್ತಿ ಬಲಗೈಯಲ್ಲಿ ಕಾಳಿಂಗ ಸರ್ಪವನ್ನು ಹಿಡಿದು ದಂಡ ಹಸ್ತದಲ್ಲಿದ್ದಾನೆ. ಕೃಷ್ಣನ ವಸ್ತ್ರದ ಕೆತ್ತನೆ ಸ್ಪಷ್ಟವಾಗಿಲ್ಲ. ಕಾಲ್ಗಡಗ ಕೆತ್ತನೆ ಹಾರಗಳು ಸ್ಪಷ್ಟವಾಗಿದೆ. ಬಲಭಾಗದ ಶಿಲ್ಪದಲ್ಲಿ ಕೃಷ್ಣ ತ್ರಿಭಂಗಿಯಲ್ಲಿ ಕೊಳಲು ಊದುತ್ತಾ ನಿಂತಿದ್ದಾನೆ. ಹಸುಗಳು ಕೊಳಲಿನ ನಾದಕ್ಕೆ ತಲೆದೂಗುತ್ತಿವೆ. ಈ ಎರಡೂ ಶಿಲ್ಪಗಳ ಮಧ್ಯೆ ಮರವನ್ನು ಕೆತ್ತಲಾಗಿದ್ದು ಇಡೀ ಕಾಳಿಂಗಮರ್ಧನ ಕಥಾನಕವನ್ನು ಚಿತ್ರಿಸುತ್ತದೆ. ಮರದ ಎಲೆಗಳನ್ನು ಹೂಬಳ್ಳಿಗಳಂತೆ ಬಿಡಿಸಲಾಗಿದೆ. ಇಲ್ಲಿ ಕೃಷ್ಣನ ಕೈಕಡಗ, ಕಾಲ್ಗೆಜ್ಜೆ, ಸೊಂಟದ ಆಭರಣಗಳು ಕಾಣುತ್ತವೆ.

**ಕಾಮಧೇನು ಮತ್ತು ಲಿಂಗ**

ಪೀಠದ ಮೇಲಿನ ಲಿಂಗವಿಗೆ ಕಾಮಧೇನು ಹಾಲುಣಿಸುವ ಕೆತ್ತನೆ ಇದಾಗಿದ್ದು ಕಾಮಧೇನು ಲಿಂಗವನ್ನು ತನ್ನ ನಾಲಿಗೆಯಿಂದ ಸವರುತ್ತಿರುವಂತಹ ಚಿತ್ರವನ್ನು ಕಾಣಬಹುದು.

**ಬೇಡರ ಕಣ್ಣಪ್ಪ**

ಈ ಶಿಲ್ಪ ಹೊಸಕೋಟೆ ಮತ್ತು ದೇವನಹಳ್ಳಿ ತಾಲೂಕುಗಳಲ್ಲಿ ಸರ್ವಸಾಮಾನ್ಯ. ಬೇಡರಕಣ್ಣಪ್ಪನು ತನ್ನ ಎಡಗೈ ಸಹಾಯದಿಂದ ಕಣ್ಣು ಕೀಳುತ್ತಿದ್ದು ಬಲಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ಎಡಗಾಲನ್ನು ಲಿಂಗಕ್ಕೆ ಒತ್ತಿ ಹಿಡಿದಿದ್ದಾನೆ. ಲಿಂಗವಿನ ಮತ್ತೊಂದು ಕಡೆ ವ್ಯಕ್ತಿಯೊಬ್ಬ ಬೇಡರಕಣ್ಣಪ್ಪನ ಈ ಕೆಲಸವನ್ನು ನೋಡುತ್ತಿದ್ದಾನೆ. ಆತನ ಒಂದು ಕೈ ಲಿಂಗವಿನ ಪೀಠದ ಮೇಲಿದ್ದು ಮತ್ತೊಂದು ಕೈ ಬುದ್ಧಿ ಹೇಳುತ್ತಿರುವಂತಿದೆ.

**ಪತಿ–ಪತ್ನಿಯರ ಆಟ**

ಇದೊಂದು ಸೊಗಸಾದ ಸಾಮಾಜಿಕ ಚಿತ್ರಣ. ಇಬ್ಬರು ದಂಪತಿಗಳು ಮೋಜಿನ ಕ್ರೀಡೆ ಆಡುತ್ತಿರುವಂತಿದೆ. ಒಬ್ಬ ಗಂಡಸು ತನ್ನ ಹೆಂಡತಿಯನ್ನು ಭುಜದ ಮೇಲೆ ಹೊತ್ತುಕೊಂಡಿದ್ದು ಆಕೆಯ ಬಲಗೈ ಗಂಡನನ್ನು ಹಿಡಿದಿದ್ದು ಎಡಗೈಯಲ್ಲಿ ಮಡಿಕೆಯನ್ನು ಮಡಿಕೆಗಳ ಸಾಲಿನ ಮೇಲೆ ಜೋಡಿಸುತ್ತಿದ್ದಾಳೆ. ಮತ್ತೊಂದು ದಂಪತಿಗಳಲ್ಲಿ ಗಂಡನು ಬೆನ್ನುಬಾಗಿಸಿ ಕುಳಿತಿದ್ದು ಆತನ ಹೆಂಡಿತಿ ಬೆನ್ನಿನ ಮೇಲೆ ಕುಕ್ಕುರುಗಾಲಿನಲ್ಲಿ ಕುಳಿತು, ಮಡಿಕೆಗಳನ್ನು ಜೋಡಿಸುತ್ತಿದ್ದಾಳೆ. ಇಂದು ಚಾಲ್ತಿಯಲ್ಲಿರುವ ಗಂಡ–ಹೆಂಡತಿಯನ್ನು ಹೊತ್ತು ಓಡುವ ಆಟದಂತೆ ಇದು ಒಂದು ಆಟವಿರಬಹುದು ಅಥವಾ ದೇವರಿಗೆ ಹರಕೆ ತೀರಿಸುವ ವಿಧಾನವಿರಬಹುದು. ಈ ಶಿಲ್ಪಗಳು ಪೀಠದ ಮೇಲೆ ನಿಂತಿಲ್ಲ.

**ದಂಪತಿಗಳ ಶಿಲ್ಪ**

ಗಂಡನು ಕಚ್ಚೆದಾರಿಯಾಗಿದ್ದು ಬಗ್ಗಿ ಉಳಿಮೆ ಕೆಲಸ ಮಾಡುತ್ತಿದ್ದಾನೆ. ಹೆಂಡತಿಯು ಗಂಡನಿಗೆ ಊಟ ತಂದು ಅವನ ಕೆಲಸವನ್ನು ನೋಡುತ್ತಿದ್ದಾಳೆ. ಆಕೆಯ ಎಡಗೈಯಲ್ಲಿ, ಪಾತ್ರೆಯಂತ ವಸ್ತು ಹಿಡಿದಿದ್ದಾಳೆ. ಬಲಗಡೆ ಸಾಕಷ್ಟು ದೊಡ್ಡದಾದ ಊಟದ ಬುತ್ತಿ ಇದೆ. ಇದೊಂದು ಸುಂದರ

ಸಾಮಾಜಿಕ ಚಿತ್ರಣ ಪುರುಷನಿಗಿಂತ ಮಹಿಳೆಯನ್ನು ಕಡಿಮೆ ಗಾತ್ರದಲ್ಲಿ ಕೆತ್ತಲಾಗಿದೆ.

**ಮುಗಬಾಲ ವೀರಭದ್ರ ಸ್ವಾಮಿ ದೇವಾಲಯ**

14ನೇ ಶತಮಾನದ ನಂತರ ವೀರಶೈವ ಧರ್ಮ ಪ್ರಚಾರಕ್ಕೆ ಬಂದಂತೆ ಇಲ್ಲಿ ವೀರಭದ್ರ ದೇವಾಲಯ ಬೆಳವಣಿಗೆಯಾಗಿದೆ. ಕ್ರಿ.ಶ.1564ರ ಸಗಟೂರು ಪ್ರಭುಗಳ ಶಾಸನದಲ್ಲಿ ಇಷ್ಟದೇವ ವೀರಭದ್ರ ದೇವರು ಎಂದೇ ಪ್ರಸ್ತಾಪಿತವಾಗಿದೆ.[13] ಕ್ರಿ.ಶ.1334ರ ಶಾಸನದಲ್ಲಿ ವೀರಭದ್ರನ ಪ್ರಸ್ತಾಪವಿಲ್ಲ. ಹೀಗಾಗಿ 15ನೇ ಶತಮಾನದಲ್ಲಿ ಇಲ್ಲಿ ವೀರಭದ್ರ ದೇವಾಲಯ ಸ್ಥಾಪನೆಯಾಗಿದೆ. ವೀರಭದ್ರ ದೇವಾಲಯದಲ್ಲಿನ ಶಾಸನ ತಿಳಿಸುವಂತೆ 'ಕೆಸರಿಯಾದಿ ಶುಕ್ಲ ಸಂವತ್ಸರದ ಪುಷ್ಯಭ ಗುರುವಾರದಂದು ವಡಿಗೇನಹಳ್ಳಿ ವೀರಶೆಟ್ಟಪ್ಪನವರು ಐದು ಅಂಕಣದ ಪಂಚಸಾಲೆಯನ್ನು ಮುಗಬಾಳಪ್ಪನ ಸೇವಾರ್ಥ ಕಟ್ಟಿಸಲಾಗಿದೆ' ಎಂದು ತಿಳಿಸುತ್ತದೆ.[14] ವೀರಭದ್ರನನ್ನು ಕ್ರಿ.ಶ.1713ರ ಈ ಶಾಸನದಲ್ಲಿ ಮುಗಬಾಳಪ್ಪ ಎಂದು ಕರೆಯಲಾಗಿದೆ.

ಮೂಲ ದೇವಾಲಯವನ್ನು ಕಿತ್ತು ಹಾಕಿ ಹೊಸ ದೇವಾಲಯವನ್ನು 2–3 ವರ್ಷಗಳ ಹಿಂದೆ ನಿರ್ಮಿಸಲಾಗಿದೆ. ಹಳೆಯ ದೇವಾಲಯದ ಕಂಭಗಳು ಮುಗಬಾಲದ ಆಂಜನೇಯ ದೇವಾಲಯದ ಬಳಿ ಇವೆ. ಇಂದು ಶ್ರೀ ವೀರಭದ್ರಸ್ವಾಮಿ ಸೇವಾ ಪ್ರತಿಷ್ಠಾನ ಎಂಬ ಟ್ರಸ್ಟ್ ಎರಡೂ ದೇವಾಲಯಗಳ ಉಸ್ತುವಾರಿ ನೋಡಿಕೊಳ್ಳುತ್ತಿದೆ. ಇಂದು ವೀರಭದ್ರನಿಗೆ ಹೆಚ್ಚಿನ ಮನ್ನಣೆ ದೊರೆಯುತ್ತಿದ್ದರೂ ಮೊದಲ ಪೂಜೆ ಸೋಮೇಶ್ವರನಿಗೆ ಸಲ್ಲುತ್ತದೆ. ಕಾರ್ತಿಕ ಮಾಸದ ಕೊನೆಯ ಮಂಗಳವಾರದಂದು ವಿಶೇಷ ಆಚರಣೆ ನಡೆಯುತ್ತದೆ. ಆ ದಿನ ಪಂಚಾಮೃತ ಅಭಿಷೇಕ ನಡೆಯುತ್ತದೆ. ರಥೋತ್ಸವದ ಇತಿಹಾಸ ಶಾಸನಗಳಲ್ಲಿ ಉಲ್ಲೇಖವಾಗಿದ್ದರೂ ಇಂದು ಯಾವುದೇ ಉತ್ಸವಗಳು ನಡೆಯುತ್ತಿಲ್ಲ.

**ಆಕರ ಗ್ರಂಥಗಳು**

**ಪ್ರಾಥಮಿಕ ಮೂಲಗಳು**


- Annual Report of the Mysore Archeological Department, Survey of Mysore, MAR, 1902-1942, The Government Press.
- B.Lewis Rice, Epigraphia Carnatica-IX and Supplementary, Mysore Government Central Press, Bangalore, 1905.
- Suryanath U Kamath (1989), Karnataka State Gazetteer, Government of Karnataka Publication.
- Suryanath U Kamath (1989), Bangalore Rural District Gazetteer, Government of Karnataka.


**ಕ್ಷೇತ್ರಕಾರ್ಯ**

- ಅರ್ಚಕರು, **ಸೋಮೇಶ್ವರ ದೇವಾಲಯ, ಮುಗಬಾಲ** , ದಿನಾಂಕ:02–12–2025

**ಸಂದರ್ಶನಗಳು**

- ಅರ್ಚಕರು, **ಸೋಮೇಶ್ವರ ದೇವಾಲಯ, ಮುಗಬಾಲ** , ದಿನಾಂಕ:02–12–2025
- ಗೋಪಾಲರಾವ್.ಹೆಚ್.ಎಸ್, ಶಾಸನತಜ್ಞರು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ದಿನಾಂಕ 27, 28 ಮತ್ತು 29ನೇ ಮೇ 2022

---

[13] ಅಡಿಟಿಪ್ಪಣಿ–168, Ht-94, AD-1564

[14] ಮೇಲಿನದೇ, Ht-95, AD-1713